# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 598 (ಮೂಲ ಸೌಲಭ್ಯ ಅಭಿವೃದ್ಧಿ, ಬಂದರುಗಳು ಮತ್ತು ಒಳನಾಡು ಜಲಸಾರಿಗೆ ಇಲಾಖೆಯಿಂದ ವರ್ಗಾಯಿತ) |
| ಸದಸ್ಯರ ಹೆಸರು | : | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 20-02-2024 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಕಲಬುರಗಿ ನಗರದ ಸಂಚಾರ ದಟ್ಟಣೆ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸುಗಮ ಸಂಚಾರಕ್ಕೆ ಸರ್ಕಾರ ಕೈಗೊಂಡಿರುವ ಯೋಜನೆಗಳು ಯಾವುವು; | ಕಲಬುರಗಿ ನಗರದಲ್ಲಿ ಸಂಚಾರ ದಟ್ಟಣೆ ಇರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಕಲಬುರಗಿ ನಗರದ ಸುಗಮ ಸಂಚಾರಕ್ಕಾಗಿ ಲೋಕೋಪಯೋಗಿ ಇಲಾಖೆ ವತಿಯಿಂದ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗಿರುತ್ತದೆ.<br><br>ಕಲಬುರಗಿ ನಗರದ ವರ್ತುಲ ರಸ್ತೆ ಒಟ್ಟು 23.40 ಕಿ.ಮೀ ಉದ್ದ ಇದ್ದು, ಈ ವರ್ತುಲ ರಸ್ತೆಯಲ್ಲಿ 9.00 ಕಿ.ಮೀ. ರಸ್ತೆ ರಾಷ್ಟ್ರೀಯ ಹೆದ್ದಾರಿ ವಿಭಾಗಕ್ಕೆ; 11.20 ಕಿ.ಮೀ. ರಸ್ತೆಯು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ವ್ಯಾಪ್ತಿಗೆ ಹಾಗೂ 3.20 ಕಿ.ಮೀ. ರಸ್ತೆಯು ಕಲಬುರಗಿ ಮಹಾನಗರ ಪಾಲಿಕೆ ವ್ಯಾಪ್ತಿಗೆ ಬರುತ್ತದೆ.<br><br>1. 9.00 ಕಿ.ಮೀ. ಹೈಕೋರ್ಟ್ ಕ್ರಾಸ್‌ನಿಂದ ಹುಮನಾಬಾದ್ ಬೇಸ್‌ವರೆಗೆ ರಾಷ್ಟ್ರೀಯ ಹೆದ್ದಾರಿ ಉತ್ತರ ವಲಯದಲ್ಲಿರುತ್ತದೆ. ಈ ವಲಯಕ್ಕೆ ಬರುವ 9.00 ಕಿ.ಮೀ. ವರ್ತುಲ ರಸ್ತೆಯಲ್ಲಿ ಸರ್ವೀಸ್ ರೋಡ ನಿರ್ಮಾಣ ಮಾಡುವ ಕಾಮಗಾರಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅನುದಾನದಡಿಯಲ್ಲಿ ಲೊಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಾಗಿರುತ್ತದೆ.<br><br>ಲೋಕೋಪಯೋಗಿ ಇಲಾಖೆಯ ಸಂಪರ್ಕ ಮತ್ತು ಕಟ್ಟಡ ವಿಭಾಗದ ವತಿಯಿಂದ 12.00 ಕಿ.ಮೀ ಕಲಬುರಗಿ ವರ್ತುಲ ರಸ್ತೆಯಲ್ಲಿ ಸುಗಮ ಸಂಚಾರಕ್ಕಾಗಿ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ರೂ.84.00 ಕೋಟಿಗಳ ಮೊತ್ತದ ಅನುದಾನದಲ್ಲಿ Service Road ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.<br><br>2. ರಾಮಮಂದಿರ ವೃತ್ತದಿಂದ NH-50ರ ಹುಮ್ನಾಬಾದ್ ವೃತ್ತದ ಭಾಗದ ಸ್ಥಳಗಳಲ್ಲಿ 12.63 ಕಿಮೀ ಉದ್ದದ ಡಿ-ಸ್ಕೋಪ್ಡ್ ಬ್ಯಾಲೆನ್ಸ್ ಸರ್ವಿಸ್ ರಸ್ತೆಯನ್ನು ಮತ್ತು ಶಾಶ್ವತ ಟೋಲ್ ಪ್ಲಾಜಾಗಳ ನಿರ್ಮಾಣದಂತಹ ಇತರ ಅಂಶಗಳನ್ನು ಒಳಗೊಂಡಂತೆ ರೂ.56.96 ಕೋಟಿ ಮೊತ್ತದ ಕಾಮಗಾರಿ ದಿನಾಂಕ: 12.01.2024 ರಂದು ಮಂಜೂರಾಗಿದ್ದು, ಈ ಪ್ರಸ್ತಾವನೆಯಲ್ಲಿ ಸರ್ವಿಸ್ ರಸ್ತೆ ಪಾಲು ಸುಮಾರು ರೂ.14.50 |

| | | |
|---|---|---|
| | | ಕೋಟಿಗಳಾಗಿರುತ್ತದೆ. ಇದಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಬಿಡ್ ಸಲ್ಲಿಕೆಯ ಅಂತಿಮ ದಿನಾಂಕ 27.02.2024 ಆಗಿರುತ್ತದೆ ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ವರದಿ ಮಾಡಿರುತ್ತದೆ. |
| ಆ) | ಕಲಬುರಗಿ ನಗರಕ್ಕೆ ಇನ್ನೊಂದು ಹೊರ ವರ್ತುಲ ರಸ್ತೆ ನಿರ್ಮಿಸುವ ಯೋಜನೆ ಯಾವ ಹಂತದಲ್ಲಿದೆ; ಈ ಯೋಜನೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲು ಎಷ್ಟು; ಯಾವ ಕಾಲಮಿತಿಯಲ್ಲಿ ಯೋಜನೆ ಪೂರ್ಣಗೊಳಿಸಲಾಗುವುದು; (ಮಾಹಿತಿ ನೀಡುವುದು) | ಕಲಬುರಗಿ ನಗರಕ್ಕೆ ಬೈಪಾಸ್ ರಸ್ತೆ ನಿರ್ಮಿಸಲು ಉದ್ದೇಶಿಸಲಾಗಿದ್ದು, ಒಟ್ಟು 41.43 ಕಿ.ಮೀ ಉದ್ದದ ರಸ್ತೆಯ ಅಂದರೆ ರಾಷ್ಟ್ರೀಯ ಹೆದ್ದಾರಿ-150ಇ (ಕಲಬುರಗಿ-ಅಫಜಲಪೂರ ಸೆಕ್ಷನ್) ದಿಂದ ರಾಷ್ಟ್ರೀಯ ಹೆದ್ದಾರಿ-50 (ಕಲಬುರಗಿ-ಜೇವರ್ಗಿ ಸೆಕ್ಷನ್) ವಯ್ಹಾ ರಾಷ್ಟ್ರೀಯ ಹೆದ್ದಾರಿ-150 (ಕಲಬುರಗಿ-ಶಹಾಬಾದ ಸೆಕ್ಷನ್(ಆಂಧ್ರಗಡಿ) ವರೆಗಿನ ರಸ್ತೆಯನ್ನು ಮೇಲ್ದರ್ಜೆಗೇರಿಸುವ ಪ್ರಸ್ತಾವನೆಯನ್ನು ರಾಜ್ಯ ಸರ್ಕಾರದಿಂದ ಕೇಂದ್ರ ಭೂಸಾರಿಗೆ ಮತ್ತು ಹೆದ್ದಾರಿಗಳ ಮಂತ್ರಾಲಯಕ್ಕೆ ದಿನಾಂಕ: 09.08.2021 ಮತ್ತು 22.08.2022 ರಂದು ಸಲ್ಲಿಸಲಾಗಿದೆ.<br><br>ಸದರಿ ಯೋಜನೆಗೆ ಇಲ್ಲಿಯವರೆಗೆ ಕೇಂದ್ರ ಭೂಸಾರಿಗೆ ಮಂತ್ರಾಲಯದಿಂದ ಅನುಮೋದನೆಯಾಗದ ಕಾರಣ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಪಾಲಿನ ಬಗ್ಗೆ ಸ್ಪಷ್ಟತೆ ಇರುವುದಿಲ್ಲ. ಸದ್ಯದಲ್ಲಿ ತಿಳಿಸಲು ಸಾಧ್ಯವಿರುವುದಿಲ್ಲ. ಹಾಗೂ ಯೋಜನೆ ಅನುಮೋದನೆಯಾದ ನಂತರ ನಿರ್ಮಾಣದ ಕಾಲಮಿತಿಯನ್ನು ಸಕ್ಷಮ ಪ್ರಾಧಿಕಾರದ ವತಿಯಿಂದ ತೀರ್ಮಾನಿಸಲಾಗುವುದು. |
| ಇ) | ಕಲಬುರಗಿ ನಗರದಲ್ಲಿ ಈಗಾಗಲೇ ಇರುವ ವರ್ತುಲ ರಸ್ತೆಯಲ್ಲಿ ತೀವ್ರ ಸಂಚಾರ ದಟ್ಟಣೆಯಿಂದಾಗಿ ಅಪಘಾತಗಳು ಸಂಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ನಗರದ ರಾಮ ಮಂದಿರ ವೃತ್ತ, ಖರ್ಗೆ ಪೆಟ್ರೋಲ್ ಬಂಕ್ ವೃತ್ತ ಹುಮನಾಬಾದ ರಸ್ತೆ ಹಾಗೂ ಅಳಂದ ಚೆಕ್ ಪೋಸ್ಟ್; ಈ ಎಲ್ಲಾ ಕಡೆ ಮೇಲೆ ಸೇತುವೆ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿದೆಯೇ? (ಮಾಹಿತಿ ನೀಡುವುದು) | ಕಲಬುರಗಿ ನಗರದ ಖರ್ಗೆ ಪೆಟ್ರೋಲ್ ಬಂಕ್ ವೃತ್ತ ಸ್ಥಳದಲ್ಲಿ ಮೇಲು ಸೇತುವೆ ಕಾಮಗಾರಿಗೆ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಅನುದಾನದಡಿ ರೂ.46.06 ಕೋಟಿಗಳ ಮೊತ್ತಕ್ಕೆ ದಿನಾಂಕ:17.03.2023 ರಂದು ಕಾರ್ಯಾದೇಶ ನೀಡಲಾಗಿರುತ್ತದೆ. ಪ್ರಸ್ತುತ ಸದರಿ ಕಾಮಗಾರಿಯ ಕುರಿತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಪ್ರಕರಣ ವಿಚಾರಣೆಯಲ್ಲಿದ್ದು, ಕಾಮಗಾರಿ ಪ್ರಾರಂಭಗೊಂಡಿರುವುದಿಲ್ಲ. ಇನ್ನುಳಿದ ರಾಮ ಮಂದಿರ ವೃತ್ತ, ಹುಮನಾಬಾದ್ ರಸ್ತೆ ಹಾಗೂ ಆಳಂದ ಚೆಕ್ ಪೋಸ್ಟ್ ಸ್ಥಳಗಳಲ್ಲಿ ಮೇಲು ಸೇತುವೆ ನಿರ್ಮಿಸುವ ಯೋಜನೆ ಸರ್ಕಾರದ ಮುಂದಿರುವುದಿಲ್ಲ. |

ಕಡತ ಸಂಖ್ಯೆ: ಲೋಇ 20 ಸಿಐಎಸ್ 2024 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು